**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.**

| ಸಿ.ಸಿ.ನಂ. 677/2024 | | | |
|---|---|---|---|
| ಸಾಕ್ಷಿದಾರರ ಹೆಸರು | ಕಲಾವಾಣಿ | | |
| ಗಂಡ:ಹೆಸರು | ಪುಟ್ಟರಾಜು | ಪಿಡಬ್ಲೂ: | 1 |
| ವಯಸ್ಸು: | 48 ವರ್ಷ | ಸಿಡಬ್ಲೂ: | 1 |
| ಉದ್ಯೋಗ: | ಕಾರ್ಮಿಕ ನೀರಿಕ್ಷರು | | |
| ವಾಸ ಸ್ಥಳ: | ಜಂಗಮಕೊಟೆ. | | |

**ದಿನಾಂಕ: 03-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ ಸ ಅ ರವರಿಂದ:-**

2017 ರಿಂದ ಏಪ್ರೀಲ್ 2026 ರವರಗೆ ಚಿಂತಾಮಣಿ ಕಾರ್ಮಿಕ ನೀರಿಕ್ಷಕರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ದಿನಾಂಕ: 25.03.2024 ರಲ್ಲಿ ಮದ್ಯಾಹ್ನ 1.20 ಗಂಟೆಗೆ ಕೆಕ್ ಪ್ಯಾರಡೈಸ್ ಎಂಬ ಸಂಸ್ಥೆಯಲ್ಲಿ ಹರ್ಷವರ್ಧನ ಎಂಬುವವರು 15 ವರ್ಷದ ಕಿಶೋರ ಕಾರ್ಮಿಕ ಕೆಲಸ ಮಾಡುತ್ತಿದ್ದು ಶಿಕ್ಷಣ ಇಲಾಖೆಯ ಸಿ ಆರ್ ಪಿ ರವರಾದ ಬಾಸ್ಕರರೆಡ್ಡಿ ಎಂಬುವವರೊಂದಿಗೆ ಬಾಲ ಕಾರ್ಮಿಕ ರನ್ನು ಕಂಡು ಹಿಡಿದು ನೂತನ ಪ್ರೌಢ ಶಾಲೆ 9 ನೇ ತರಗತಿ ದಾಖಲಿಸಿರುತ್ತೇವೆ. ನಂತರ ಆ ಬಾಲಕನನ್ನು ಅವರ ತಾಯಿ ವಿಮಲರವರ ವಶಕ್ಕೆ ಒಪ್ಪಿಸಿರುತ್ತೇನೆ. ನಂತರ ನಗರ ಪೋಲಿಸ್ ಠಾಣೆಯಲ್ಲಿ ಸದರಿ ವಿಚಾರ ಬಗ್ಗೆ ನಾನು ದೂರನ್ನು ನೀಡಿರುತ್ತೇನೆ. ಕೆಕ್ ಪ್ಯಾರಡೈಸ್ ಮಾಲಿಕರಾದ ನಂದೀಶ್ ವಿರುದ್ಧ ದೂರನ್ನು ನೀಡಿರುತ್ತೇನೆ. ನಂತರ ದೂರು ಕೊಟ್ಟ ಮಾರನೇ ದಿನ ಚಿಂತಾಮಣಿ ಪೊಲಿಸರು ಸ್ಥಳ ಪಂಚನಾಮೆಯನ್ನು ತಯಾರಿಸಿರುತ್ತಾರೆ. ನಾನು ದೂರು

ನೀಡುವ ಮುಂಚೆ ನೀರಿಕ್ಷಣಾ ಟಿಪ್ಪಣಿ ಬಾಲ ಕಾರ್ಮಿಕರ ಹೇಳಿಕೆಯನ್ನು ಮತ್ತು ಸ್ಥಳ ಪಂಚನಾಮೆಯನ್ನು ತಯಾರಿಸಿ ಸದರಿ ದಾಖಲೆಯನ್ನು ನನ್ನ ದೂರಿನ ಜೊತೆಗೆ ಪೊಲಿಸರಿಗೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ದೂರಿನಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸ್ಥಳ ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನೀರಿಕ್ಷಣಾ ಟಿಪ್ಪಣಿಯನ್ನು ನಿಪಿ-3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಬಾಲಕ ಕಾರ್ಮಿಕ ಹೇಳಿಕೆ ನಿಪಿ-4 ಮತ್ತು ಸಾಕ್ಷಿಯ ಹೇಳಿಕೆಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಂಸ್ಥೆಯ ಚಕ್ಕುಬಂದಿ ವಿವರಗಳನ್ನು ನಿಪಿ-5 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಕಾರ್ಮಿಕ ಕೆಲಸ ಮಾಡುವ ಹಾಜರಿದ್ದ ಅಧಿಕಾರಿಗಳ ವಿವರವನ್ನು ನಿಪಿ-6 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು: ಶ್ರೀ.ಆರ್.ಸಿ.ಎಸ್. ಆರೋಪಿ ಪರ ವಕೀಲರಿಂದ:-**

ನಿಮ್ಮ ಕಚೇರಿ ವೇಳೆ ಎಷ್ಟು ಸಮಯಕ್ಕೆ ಶುರುವಾಗುತ್ತದೆ ಎಂದರೆ 10 ಗಂಟೆಯಿಂದ 5.30 ಗಂಟೆಯವರೆಗೂ ಇರುತ್ತದೆ. ಲೇಬರ್ ಇನ್ಸ್ಪೆಕ್ಟರ್ ಆಗಿ ಎಷ್ಟು ವರ್ಷ ಆಗಿರುತ್ತದೆ ಎಂದರೆ 10 ವರ್ಷ ಆಗಿರುತ್ತದೆ. ನಿಮ್ಮ ಕಚೇರಿಯಲ್ಲಿ ಕೆಲಸದ ರಿಜಿಸ್ಟರ್ ಅನ್ನು ಮೆಂಟೈನ್ ಮಾಡುತ್ತೀರಾ ಎಂದರೆ ಮಾಡುತ್ತೇನೆ. ನೀವು ನಿಮ್ಮ ಕಚೇರಿಯಲ್ಲಿ ಮುಮೆಂಟ್ ರಿಜಿಸ್ಟರ್ ನಲ್ಲಿ ದಿನ ನಿತ್ಯದ ಕೆಲಸದ ಸಮಯ ನಮೂದು ಮಾಡಿರುತ್ತೀರಾ ಎಂದರೆ ಮಾಡಿರುತ್ತೇನೆ. ಸದರಿ ರಿಜಿಸ್ಟರ್ ಅನ್ನು

ಸಿಡಬ್ಲೂಃ 1

ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ಇಲ್ಲ. ಬೇಕರಿಗೂ ಮತ್ತು ನಿಮ್ಮ ಕಚೇರಿಗೂ ಎಷ್ಟು ದೂರ ಆಗುತ್ತದೆ ಎಂದರೆ ಸುಮಾರು 1 ಕಿ.ಮಿ ಆಗುತ್ತದೆ. ನಿಮ್ಮ ಕಚೇಯಿಂದ ಬೇಕರಿಗೆ ಹೋಗಲು ಎಷ್ಟು ಸಮಯ ಬೇಕಾಗುತ್ತದೆ ಎಂದರೆ 10 ರಿಂದ 15 ನಿಮಿಷ ಬೇಕಾಗುತ್ತದೆ ಎನ್ನುತ್ತಾರೆ. ಸದರಿ ಘಟನಾ ದಿನದಂದು ಕಚೇರಿಯಿಂದ ರೇಡ್ ಮಾಡಲು ಹೋದಾಗ ಎಷ್ಟು ಸಮಯ ಆಗಿತ್ತು ಎಂದರೆ ಮದ್ಯಾಹ್ನ 1 ಗಂಟೆ ಆಗಿತ್ತು. ಸದರಿ ದಿನದಂದು ಎಷ್ಟು ಬೇಕರಿ ಅಂಗಡಿಯನ್ನು ವೀಕ್ಷಣೆ ಮಾಡುತ್ತೀರಾ ಎಂದರೆ ಇದೊಂದೇ ಬೇಕರಿಯನ್ನು ಮಾಡಿರುತ್ತೆನೆ. ನಿಮ್ಮ ಕಚೇರಿಯಿಂದ ಸದರಿ ಬೇಕರಿ ಹೋಗುವ ಮದ್ಯೆ ಹಲವಾರು ಬೇಕರಿಗಳು ಇರುತ್ತವೆ ಎಂದರೆ ಇರುತ್ತವೆ. ನಿಮ್ಮ ಕಚೇರಿಯಿಂದ ರೇಡ್ ಮಾಡಲು ಯಾವ ವಾಹನದಲ್ಲಿ ಹೋಗಿರುತ್ತೀರಾ ಎಂದರೆ ದ್ವಿಚಕ್ರ ವಾಹನದಲ್ಲಿ ಹೊಗಿರುತ್ತೇನೆ ಆ ದಿನ ಯಾರು ಯಾರು ಇರುತ್ತೀರಾ ಎಂದರೆ ನಾನು ಮತ್ತು ಸಿ ಆರ್ ಪಿ ಭಾಸ್ಕರರೆಡ್ಡಿ ಇರುತ್ತೇವೆ. ನಿಮ್ಮ ದೂರಿನಲ್ಲಿ ಯಾರು ಯಾರು ಹೊಗಿರುತ್ತೀರಾ ಮತ್ತು ಯಾವ ವಾಹನದಲ್ಲಿ ಹೊಗಿರುತ್ತೀರಾ ಎಂದರೆ ಹೇಳಿರುತ್ತೀರಾ ಎಂದರೆ ವಾಹನದಲ್ಲಿ ಹೋಗಿರುವುದನ್ನು ಹೇಳಿಲ್ಲ ಯಾರು ಯಾರು ಹೋಗಿರುವುದನ್ನು ಹೇಳಿರುತ್ತೇನೆ. ನಿಪಿ-1 ರಲ್ಲಿ ಆ ರೀತಿ ಹೇಳಿರುವುದಿಲ್ಲ ಎಂದರೆ ಹೇಳಿರುತ್ತೇನೆ. ನೀವು ಹೇಳಿರುವ ಬೇಕರಿ ಅಕ್ಕ ಪಕ್ಕದಲ್ಲಿ ಸ್ಕೂಲ್, ಹಾಸ್ಪಿಟಲ್, ಬಸ್ ಡಿಪೋ ಎಲ್ಲಾ ಇರುತ್ತವೆ ಎಂದರೆ ಇರುತ್ತವೆ. ಸದರಿ ಸ್ಥಳದಲ್ಲಿ ಚಿಕ್ಕ ಮಕ್ಕಳು ಓಡಾಡುತ್ತಿತ್ತಾರೆ ಎಂದರೆ ಓಡಾಡುತ್ತಿರುತ್ತಾರೆ. ಎಷ್ಟು ಸಮಯಕ್ಕೆ ಬೇಕರಿ ಒಳಗಡೆ ಹೋಗಿರುತ್ತೀರಾ ಎಂದರೆ 1 ಗಂಟೆ ಸಮಯದಲ್ಲಿ ಹೋಗಿರುತ್ತೆವೆ. ನೀವು ಹೋದಾಗ ಸದರಿ ಬೇಕರಿಯಲ್ಲಿ ಎಷ್ಟು ಜನ ಇದ್ದರು ಎಂದರೆ ಇಬ್ಬರು ಇದ್ದರು. ಸದರಿ ಬೇಕರಿಗೆ ಇದ್ದ ಕಸ್ಟಮರ್ ಗಳನ್ನು ವಿಚಾರಣೆ ಮಾಡಿರುತ್ತೀರಾ ಎಂದರೆ ಇಲ್ಲ. ಸದರಿ ಬೇಕರಿಯಲ್ಲಿ ಯಾವ ದಾಖಲೆಗಳನ್ನು

ಪಡೆದಿರುತ್ತೀರಾ ಎಂದರೆ ಸಾಕ್ಷಿ ಬಾಲ ಕಾರ್ಮಿಕನ ಹೇಳಿಕೆಯನ್ನು ಪಡೆದಿರುತ್ತೇನೆ. ಆಗ ಸಮಯ ತೆಗೆದುಕೊಂಡಿರುತ್ತೀರಿ ಎಂದರೆ 40 ನಿಮಿಷಗಳ ಕಾಲ ವಿಚಾರಣೆ ಮಾಡಿರುತ್ತೇನೆ. ಸದರಿ ಬೇಕರಿಯ ದಾಖಲೆ ಪಡೆದಿರುತ್ತೀರಾ ಎಂದರೆ ಇಲ್ಲ. ಸದರಿ ದಿನದಂದು ನೀವು ಯಾವುದೇ ರೇಡ್ ಮಾಡಿರುವುದಿಲ್ಲ ಸುಳ್ಳು ಸಾಕ್ಷ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಮಾಡುವಾಗ ಯಾರು ಯಾರು ಇದ್ದೀರಾ ಎಂದರೆ ನಾನು ಹೋಗಿರುತ್ತೇನೆ. ನಿಮ್ಮನ್ನು ಯಾರು ಬರಮಾಡಿಕೊಂಡಿರುತ್ತಾರೆ ಎಂದರೆ ಪೋಲಿಸರು ಬರಮಾಡಿಕೊಂಡಿರುತ್ತಾರೆ. ನಿಮಗೆ ಭಾತ್ಮಿದಾರರಿಂದ ಮಾಹಿತಿ ಬಂದಿರುತ್ತದಾ ಎಂದರೆ ಬಂದಿರುತ್ತದೆ. ಅದರ ಬಗ್ಗೆ ನಿಮ್ಮ ದೂರಿನಲ್ಲಿ ಉಲ್ಲೇಖ ಮಾಡಿರುತ್ತೀರಾ ಎಂದರೆ ಇಲ್ಲ. ಮಹಜರ್ ನ ಸಾಕ್ಷಿದಾರರನ್ನು ನಿಮ್ಮ ಕಚೇರಿಗೆ ಬರಮಾಡಿಕೊಂಡಿರುತ್ತೀರಾ ಎಂದರೆ ಇಲ್ಲ. ಹರ್ಷವರ್ಧನ್ ರವರನ್ನು ಮೆಡಿಕಲ್ ಮಾಡಿಸಿರುತ್ತೀರಾ ಎಂದರೆ ಇಲ್ಲ. ಆ ರೀತಿ ಕರೆದುಕೊಂಡು ಹೋಗಲು ತೊಂದರೆ ಇತ್ತಾ ಎಂದರೆ ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ. ಸದರಿ ದಿನದಂದು ಯಾವುದೇ ರೀತಿಯ ರೇಡ್ ಮಾಡಿರುವುದಿಲ್ಲ, ಆ ರೀತಿ ಬಾಲ ಕಾರ್ಮಿಕ ಯಾರು ಇರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಕಚೇರಿಯ ಅಂಕೆ ಸಂಖ್ಯೆಗೋಸ್ಕರ ಸುಳ್ಳು ದೂರನ್ನು ಕೊಟ್ಟಿರುತ್ತೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)** **ಓ ಹೇ ಕೇ ಸ ಇದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.